# 10

# ಹೊಸ ಒಡಂಬಡಿಕೆ - ಸಂಪೂರ್ಣ ಕ್ಷಮಾಪಣೆ

> *"ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ, ... ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ" (ಇಬ್ರಿಯ 10:19-22).*

ಸಿನಾಯಿ ಪರ್ವತದ ಬಳಿಯಲ್ಲಿ ಧರ್ಮಶಾಸ್ತ್ರವು ಕೊಡಲ್ಪಡುವ ಮೊದಲು ಪಾಪಗಳ ಕ್ಷಮಾಪಣೆಯನ್ನು ಕುರಿತು ಬೈಬಲಿನಲ್ಲಿ ಏನೂ ಪ್ರಕಟಿಸಲ್ಪಟ್ಟಿಲ್ಲ. ಯಜ್ಞಗಳು ಅರ್ಪಿಸಲ್ಪಡುತ್ತಿದ್ದವು; ಹಾಗಿದ್ದರೂ ಈ ಯಜ್ಞಗಳ ನಿರ್ದಿಷ್ಟ ಉದ್ದೇಶವು ಪ್ರಕಟಿಸಲ್ಪಟ್ಟಿರುವದಿಲ್ಲ. ಕಾಯಿನ ಮತ್ತು ಹೇಬೆಲರ ಅರ್ಪಣೆಗಳು (ಆದಿಕಾಂಡ 4:3, 4) ದೋಷಪರಿಹಾರಕ ಯಜ್ಞಗಳಾಗಿರಬಹುದು, ಆದರೆ ಅವು ಕೃತಜ್ಞತಾಸ್ತುತಿಯ ಇಲ್ಲವೇ ಸ್ವೇಚ್ಛೆಯಿಂದ ಅರ್ಪಿಸಿದ ಯಜ್ಞಗಳಾಗಿರಬಹುದು (ಯಾಜಕಕಾಂಡ 7:12, 16). ನೋಹನ (ಆದಿಕಾಂಡ 8:20), ಅಬ್ರಹಾಮನ (ಆದಿಕಾಂಡ 22:13); ಯಾಕೋಬನ (ಆದಿಕಾಂಡ 31:54; 46:1) ಮತ್ತು ಇತ್ರೋವನು (ವಿಮೋಚನಕಾಂಡ 18:12) ಮಾಡಿದ ಸರ್ವಾಂಗ ಹೋಮ ಯಜ್ಞಗಳು ದೋಷಪರಿಹಾರಕ ಯಜ್ಞಗಳಾಗಿರಲಿಕ್ಕಿಲ್ಲ; ಆದರೆ ಯೋಬನು ತನ್ನ ಮಕ್ಕಳ ಪರವಾಗಿ ಮಾಡಿದ ಯಜ್ಞಗಳು ದೋಷಪರಿಹಾರಕ ಯಜ್ಞಗಳಾಗಿದ್ದವು (ಯೋಬ 1:5).

### ಧರ್ಮಶಾಸ್ತ್ರದ ಅಧೀನತೆಯಲ್ಲಿ ಕ್ಷಮಾಪಣೆ

ಧರ್ಮಶಾಸ್ತ್ರದ ಅಧೀನತೆಯಲ್ಲಿ, ಮಾಡಲ್ಪಟ್ಟ ಪಾಪಗಳು ಮರಣದೊಂದಿಗೆ ಘೋರವಾಗಿ ದಂಡಿಸಲ್ಪಡಬೇಕಾಗಿದ್ದವು.

> ಆದರೆ ಸ್ವದೇಶದವನಾಗಲಿ ಅನ್ಯದೇಶದವನಾಗಲಿ ಯಾವನಾದರೂ ಮನಃಪೂರ್ವಕವಾಗಿ ಹಟದಿಂದ ಪಾಪವನ್ನು ಮಾಡಿದರೆ ಅವನು ಯೆಹೋವನನ್ನು ದೂಷಿಸಿದವನಾದ್ದರಿಂದ ಕುಲದಿಂದ ತೆಗೆದು ಹಾಕಲ್ಪಡಬೇಕು. ಆ ಮನುಷ್ಯನು ಯೆಹೋವನ ಮಾತನ್ನು ತಾತ್ಸಾರಮಾಡಿ ಆತನ ಆಜ್ಞೆಯನ್ನು ಮೀರಿದ್ದರಿಂದ ತೆಗೆದು ಹಾಕಲ್ಪಡಬೇಕು; ಅವನು ತನ್ನ ಪಾಪದ ಫಲವನ್ನು ಅನುಭವಿಸಲಿ (ಅರಣ್ಯಕಾಂಡ 15:30, 31).

"ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೇ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೆ" (ಇಬ್ರಿಯ 10:28) ಎಂದು ನಾವು ಓದುತ್ತೇವೆ. ಮೀರಿದವನಿಗೆ ಯಾವ ದಯೆಯೂ ತೋರಿ ಸಲ್ಪಡಲಾರದು, ಮತ್ತು ಶಿಕ್ಷೆಯಿಂದ ಒಬ್ಬ ವ್ಯಕ್ತಿಯನ್ನು ಬಿಡಿಸಲು ಯಾವದನ್ನೂ ಕೊಡಲು ಅಪ್ಪಣೆ ಇರಲಿಲ್ಲ. ಕೊಲಗಾರನ ಶಿಕ್ಷೆಯನ್ನು ಕುರಿತು ಧರ್ಮಶಾಸ್ತ್ರವು ಹೀಗೆ ಹೇಳುತ್ತದೆ: "ಮರಣ ಶಿಕ್ಷೆಗೆ ಪಾತ್ರನಾದ ಕೊಲೆಪಾತಕನನ್ನು ಉಳಿಸುವದಕ್ಕೆ ಈಡನ್ನು ತೆಗೆದು ಕೊಳ್ಳಬಾರದು; ಅವನಿಗೆ ಮರಣಶಿಕ್ಷೆಯೇ ಆಗಬೇಕು" (ಅರಣ್ಯಕಾಂಡ 35:31).

**ಪಾಪಕ್ಕಾಗಿ ಯಜ್ಞ**

ಅರಣ್ಯಕಾಂಡ 15ರ ಪ್ರಕಾರ, ತಿಳಿಯದೆ ತಪ್ಪು ಮಾಡುವವರು ಕ್ಷಮಿಸಲ್ಪಡುವದಕ್ಕಾಗಿ ಯಜ್ಞವನ್ನು ಸಮರ್ಪಿಸಬೇಕು. ದೇವರು ಅವರಿಗೆ ಹೀಗೆ ಹೇಳಿದನು,

> ಯೆಹೋವನು ಮೋಶೆಯ ಮೂಲಕ ಈ ಆಜ್ಞೆಗಳನ್ನು ಕೊಟ್ಟ ದಿನ ಮೊದಲುಗೊಂಡು ನಿಮ್ಮ ಎಲ್ಲಾ ತಲಾಂತರಗಳವರೆಗೂ ಯಾವಾಗಲಾದರೂ ಸಮೂಹದವರು ತಿಳಿಯದೆ ಇವುಗಳಲ್ಲಿ ಒಂದನ್ನು ಮೀರಿ ದೋಷಿಗಳಾದರೆ ಅವರೆಲ್ಲರೂ ಒಟ್ಟಾಗಿ ಯೆಹೋವನಿಗೆ ಸುವಾಸನೆಯನ್ನುಂಟು ಮಾಡುವದಕ್ಕೋಸ್ಕರ ಸರ್ವಾಂಗ ಹೋಮವಾಗಿ ಒಂದು ಹೋರಿಯನ್ನೂ ನೈವೇದ್ಯವಾಗಿ ಅದಕ್ಕೆ ನೇಮಿತವಾದ ಧಾನ್ಯದ್ರವ್ಯ ಪಾನದ್ರವ್ಯಗಳನ್ನೂ ದೋಷ ಪರಿಹಾರಕ ಯಜ್ಞವಾಗಿ ಒಂದು ಹೋತವನ್ನೂ ಸಮರ್ಪಿಸಬೇಕು. ಯಾಜಕನು ಇಸ್ರಾಯೇಲ್ಯರ ಸರ್ವ ಸಮೂಹದವರಿಗೋಸ್ಕರ ದೋಷ ಪರಿಹಾರವನ್ನು ಮಾಡಿದಾಗ ಅವರಿಗೆ ಕ್ಷಮಾಪಣೆಯಾಗುವದು. ಅವರು ಆ ತಪ್ಪನ್ನು ತಿಳಿಯದೆ ಮಾಡಿದ್ದರಿಂದ ಮತ್ತು ಅವರು ಅದನ್ನು ಪರಿಹರಿಸುವದಕ್ಕಾಗಿ ಯೆಹೋವನ ಸನ್ನಿಧಿಯಲ್ಲಿ ಸರ್ವಾಂಗ ಹೋಮವನ್ನೂ ದೋಷಪರಿಹಾರಕ ಯಜ್ಞವನ್ನೂ ಮಾಡಿಸಿದ್ದರಿಂದ ಇಸ್ರಾಯೇಲ್ಯರ ಸರ್ವ ಸಮೂಹದವರಿಗೂ ಅವರಲ್ಲಿ ಇಳುಕೊಂಡಿರುವ ಅನ್ಯದೇಶದವರಿಗೂ ಕ್ಷಮಾಪಣೆಯಾಗುವದು. ಜನರೆಲ್ಲರೂ ಆ ತಪ್ಪನ್ನು ತಿಳಿಯದೆ ಮಾಡಿದರಲ್ಲಾ. ಯಾವನಾದರೂ ಒಬ್ಬನು ಮಾತ್ರ ತಿಳಿಯದೆ ತಪ್ಪು ಮಾಡಿದರೆ ಅವನು ದೋಷ ಪರಿಹಾರಕ ಯಜ್ಞಕ್ಕಾಗಿ ಒಂದು ವರುಷದ ಆಡನ್ನು ಸಮರ್ಪಿಸಬೇಕು. ತಿಳಿಯದೆ ತಪ್ಪುಮಾಡಿದವನಿಗೋಸ್ಕರ ಯಾಜಕನು ಯೆಹೋವನ ಸನ್ನಿಧಿಯಲ್ಲಿ ದೋಷಪರಿಹಾರವನ್ನು ಮಾಡಿದಾಗ ಅವನಿಗೆ ಕ್ಷಮಾಪಣೆಯಾಗುವದು (ವಚನಗಳು 22-28).

ದೋಷಪರಿಹಾರಕ ಯಜ್ಞ ಮತ್ತು ಪ್ರಾಯಶ್ಚಿತ್ತ ಯಜ್ಞಗಳ ನಿಯಮಗಳು ಯಾಜಕಕಾಂಡ 4:1-7:10ರಲ್ಲಿ ಬಹಳ ಹೆಚ್ಚು ವಿವರಗಳಲ್ಲಿ ಕೊಡಲ್ಪಟ್ಟಿರುವವು. ಪಾಪಕ್ಕಾಗಿ ಒಂದು ಅರ್ಪಣೆಯು ಮಾಡಲ್ಪಟ್ಟ ನಂತರ, ಪಾಪಮಾಡಿದವನು "ಕ್ಷಮಿಸಲ್ಪಡುವನು" ಎಂದು ದೇವರು ಇಸ್ರಾಯೇಲ್ಯರಿಗೆ ಭರವಸೆಕೊಟ್ಟನು (ಯಾಜಕಕಾಂಡ 4:20, 26, 31, 35; 5:10, 13, 16, 18; 6:7; 19:22). ಪಾಪಗಳು ಕ್ಷಮಿಸಲ್ಪಟ್ಟರೂ ಪ್ರಾಣಿಗಳ ರಕ್ತವು ಅವರನ್ನು ಕ್ಷಮಿಸಲಿಲ್ಲ. ಶಿಲುಬೆಯ ಮೇಲೆ ಯೇಸುವಿನ ಮರಣವು ಮೊದಲನೆಯ ಒಡಂಬಡಿಕೆಯ ಅಧೀನತೆಯಲ್ಲಿ ಇದ್ದವರ ಪಾಪಗಳನ್ನು ಕ್ಷಮಿಸಿತು (ರೋಮಾಪುರ 3:25; ಇಬ್ರಿಯ 9:15).

**ಹೋರಿಗಳ ಮತ್ತು ಹೋತಗಳ ರಕ್ತ**

"ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ" (ಇಬ್ರಿಯ 10:4) ಎಂದು ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಹೇಳುತ್ತದೆ. ಪ್ರಾಣಿಗಳ ರಕ್ತವು ಪಾಪಗಳನ್ನು ಕ್ಷಮಿಸದಿದ್ದರೆ, "ಪಾಪವು ... ಕ್ಷಮಿಸಲ್ಪಡುವುದು" (ಉದಾಹರಣೆಯಾಗಿ ನೋಡಿರಿ, ಯಾಜಕಕಾಂಡ 4:20, 26, 30, 35) ಎಂಬ ಧರ್ಮಶಾಸ್ತ್ರದಲ್ಲಿಯ ಹೇಳಿಕೆಯು, ಆಗ ಪಾಪಗಳು ಕ್ಷಮಿಸಲ್ಪಡಲಿಲ್ಲ ಆದರೆ ಒಂದು ಭವಿಷ್ಯದ ಸಮಯದಲ್ಲಿ ಕ್ಷಮಿಸಲ್ಪಡುವುದು ಎಂದು ಅನ್ವಯವಾಗುವುದೋ?

ಹಳೇ ಒಡಂಬಿಕೆಯ ಕೆಲವು ಹೇಳಿಕೆಗಳು ಆ ಅವಧಿಯಲ್ಲಿ ದೇವರು ಪಾಪಗಳನ್ನು ಕ್ಷಮಿಸಿದನು ಎಂದು ಸ್ಪಷ್ಟವಾಗಿ ಬೋಧಿಸುತ್ತವೆ. ದೇವರಿಗೆ ಮೋಶೆಯ ಪ್ರಾರ್ಥನೆ ಹಾಗೂ ಆತನ ಉತ್ತರವು ಶಿಲುಬೆಗಿಂತ ಮೊದಲೇ ದೇವರು ಪಾಪಗಳನ್ನು ಕ್ಷಮಿಸಿದನೆಂದು ತೋರಿಸುತ್ತದೆ. "ನಾವು ಐಗುಪ್ತ ದೇಶದಿಂದ ಬಂದದ್ದು ಮೊದಲುಗೊಂಡು ಇದುವರೆಗೆ ನೀನು ಈ ಜನರ ಪಾಪಗಳನ್ನು ಕ್ಷಮಸಿದ ಪ್ರಕಾರವೇ ಈಗಲೂ ಮಹಾಕೃಪೆಯಿಂದ ಇವರ ಪಾಪವನ್ನು ಕ್ಷಮಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ ಎಂದು ಪ್ರಾರ್ಥಿಸಿದನು. ಅದಕ್ಕೆ ಯೆಹೋವನು, 'ನಿನ್ನ ಪ್ರಾರ್ಥನೆಯ ಮೇರೆಗೆ ನಾನು ಕ್ಷಮಿಸಿದ್ದೇನೆ ಎಂದನು' (ಅರಣ್ಯಕಾಂಡ 14:19, 20). ಬತ್ಶೆಬೆಳೊಂದಿಗೆ ದಾವೀದನು ಪಾಪಮಾಡಿದಾಗ, ನಾತಾನನ್ನು, "ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವದಿಲ್ಲ" (2 ಸಮುವೇಲ 12:13ಬಿ) ಎಂದು ಭರವಸೆಕೊಟ್ಟನು. ಇಸ್ರಾಯೇಲ್ಯರು "ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು" ಎಂದು ದೇವರು ಸೊಲೊಮೋನನ ಮುಖಾಂತರ ಇಸ್ರಾಯೇಲ್ಯರಿಗೆ ಹೇಳಿದನು (2 ಪೂರ್ವಕಾಲವೃತ್ತಾಂತ 7:14).

ಹಳೇ ಒಡಂಬಡಿಕೆಯ ಅವಧಿಯ ಸಮಯದಲ್ಲಿಯೂ ದೇವರು ಜನರನ್ನು ಕ್ಷಮಿಸಿದನೆಂದು ಪುರಾವೆಯು ತೋರಿಸುತ್ತದೆ. ಯೇಸುವಿನ ಮರಣದ ಮೇಲೆ ಅವಲಂಭಿಸಿ ಆತನು ಇದನ್ನು ಮಾಡಬಹುದು ಯಾಕಂದರೆ ಆತನ ಮರಣವು ಮೊದಲು ಘಟನೆಯ ನಂತರ ದೇವರೊಂದಿಗೆ ನಿಶ್ಚಿತವಾಗಿತ್ತು. ದೇವರು ಯೇಸುವಿನ ಮರಣವನ್ನು ಮುಂಚಿತವಾಗಿಯೇ (ಯೆಶಾಯ 53:4-12; ಅಪೊಸ್ತಲರ ಕೃತ್ಯಗಳು 2:23), ಸೃಷ್ಟಿಗಿಂತ ಮೊದಲೇ (1 ಪೇತ್ರ 1:18, 20) ಯೋಜಿಸಿದ್ದನು.

ಯೇಸುವಿನ ಮರಣದ ಮುಖಾಂತರ, ಹಿಂದಿನ ಪಾಪಗಳನ್ನು ಕ್ಷಮಿಸಲು ಆತನು ನ್ಯಾಯವುಳ್ಳವನಾಗಿರುವನೆಂಬುದನ್ನು ದೇವರು ತೋರಿಸಿದನು. "ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿದ್ದಾನೆ" (ರೋಮಾಪುರ 3:26). ಯೇಸುವಿನ ಮರಣವು ಹೊಸ ಒಡಂಬಡಿಕೆಯ ಅಧೀನತೆಯಲ್ಲಿರುವವರನ್ನು ಮಾತ್ರವೇ ಕ್ಷಮಿಸುತ್ತದೆ ಅಷ್ಟೇ ಅಲ್ಲ, ಆದರೆ ಮೊದಲನೆಯ ಒಡಂಬಡಿಕೆಯ ಅಧೀನದಲ್ಲಿರುವವರಿಗೂ ಕ್ಷಮಾಪಣೆಯ ತಳಹದಿಯಾಗಿರುತ್ತದೆ. ಹೀಗೆ ಇಸ್ರಾಯೇಲ್ಯರೂ ಸಹ ಧರ್ಮಶಾಸ್ತ್ರವು ವಾಗ್ದಾನ ಮಾಡದೇ ಇರುವ ಆಶೀರ್ವಾದವನ್ನು, ನಿತ್ಯಬಾಧ್ಯಸ್ತಿಕೆಯನ್ನು ಹೊಂದಿಕೊಳ್ಳುವರು. "ಈ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆಯ ಒಡಂಬಡಿಕೆಯ ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು

ಮರಣವನ್ನು ಅನುಭವಿಸಿದ್ದರಿಂದ ದೇವರಿಂದ ಕರೆಯಿಸಿಕೊಂಡವರು ವಾಗ್ದಾನವಾಗಿದ್ದ ನಿತ್ಯ ಬಾಧ್ಯತೆಯನ್ನು ಹೊಂದುವದಕ್ಕೆ ಆತನ ಮೂಲಕ ಮಾರ್ಗವಾಯಿತು" (ಇಬ್ರಿಯ 9:15).

ವೈಯಕ್ತಿಕ ಅರ್ಹತೆ ಮತ್ತು ಇಲ್ಲವೇ ಯಜ್ಞಗಳ ಮೇಲೆ ಮಾತ್ರವೇ ಅವಲಂಭಿಸಿ ಅಲ್ಲ, ಆದರೆ ಇಡೀ ಜಗತ್ತಿನ ಪಾಪಗಳಿಗಾಗಿ ಸುರಿಸಿದ ಯೇಸುವಿನ ರಕ್ತದ ಆಧಾರದ ಮೇಲೆ, ದೇವರು ಇಸ್ರಾಯೇಲ್ಯರ ಪಾಪಗಳನ್ನು ಕ್ಷಮಿಸಿದನು (1 ಯೋಹಾನ 2:2). ಎಲ್ಲಾ ಯುಗಗಳಲ್ಲಿ ಪಾಪಗಳ ಕ್ಷಮಾಪಣೆಯು ಯೇಸುವಿನ ರಕ್ತದ ಮೇಲೆ ಅವಲಂಭಿಸಿರುತ್ತದೆ. "ರಕ್ತಧಾರೆಯಿಲ್ಲದೆ ಕ್ಷಮಾಪಣೆ ಇರುವದಿಲ್ಲ" (ಇಬ್ರಿಯ 9:22ಬಿ). ಯೇಸುವಿನ ರಕ್ತವು ಮಾತ್ರವೇ ಪಾಪಗಳನ್ನು ಕ್ಷಮಿಸುವ ರಕ್ತವಾಗಿದೆ.

## ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಕ್ಷಮಾಪಣೆ

ಪಾಪವು, ದೇವರ ಸ್ವಭಾವಕ್ಕೆ ಸಂಪೂರ್ಣವಾಗಿ ವಿರುದ್ಧವಾದದ್ದರಿಂದ, ಅದು ಆತನ ರೋಷವನ್ನು ಕೆರಳಿಸುತ್ತದೆ:

> ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು ಪರಲೋಕದಿಂದ ತೋರಿಬರುತ್ತದೆ (ರೋಮಾಪುರ 1:18).
>
> ಜಾರರು ದುರಾಚಾರಿಗಳು ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ. ಹುರುಳಿಲ್ಲದ ಮಾತುಗಳನ್ನಾಡುವವರಿಗೆ ಕಿವಿಗೊಟ್ಟು ಮೋಸಹೋಗ ಬೇಡಿರಿ; ಅಂಥ ಕೃತ್ಯಗಳ ನಿಮಿತ್ತದಿಂದ ದೇವರ ಕೋಪವು ಆತನಿಗೆ ಅವಿಧೇಯರಾಗಿರುವವರ ಮೇಲೆ ಬರುತ್ತದೆ (ಎಫೆಸ 5:5, 6).
>
> ಆದುದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವನೆಗಳನ್ನು ಸಾಯಿಸಿರಿ. ಜಾರತ್ವ, ಬಂಡುತನ, ಕಾಮಾಭಿಲಾಷೆ, ದುರಾಶೆ, ವಿಗ್ರಹಾರಧನೆಗೆ ಸಮವಾಗಿರುವ ಲೋಭ ಇವುಗಳನ್ನು ವಿಸರ್ಜಿಸಿಬಿಡಿರಿ. ಇವುಗಳ ನಿಮಿತ್ತ ದೇವರ ಕೋಪವು ಉಂಟಾಗುತ್ತದೆ (ಕೊಲೊಸ್ಸೆ 3:5, 6).

ಪಾಪವಾಗಿರುವ (1 ಯೊಹಾನ 3:4), ಅಧರ್ಮವನ್ನು ಕರ್ತನು ದ್ವೇಷಿಸುವದರಿಂದ, ದೇವರ ರೋಷವು ಸುರಿಸಲ್ಪಡುವುದು (ಇಬ್ರಿಯ 1:9).

ಪಾಪಕ್ಕೆ ದೇವರ ಕೋಪ ಶಿಕ್ಷೆ ಆಯಿತು, ಅದು ದೇವರಿಂದ ನಮ್ಮನ್ನು ಬೇರೆ ಮಾಡಿ, ದೂರ ಮಾಡುತ್ತದೆ. "ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರೂ ದ್ವೇಷ ಮನಸ್ಸುಳ್ಳವರೂ ಆಗಿದ್ದಿರಿ" (ಕೊಲೊಸ್ಸೆ 1:21) ಎಂದು ಪೌಲನು ಬರೆದನು. ಕ್ಷಮಿಸಲ್ಪಡದ ಪಾಪಿಗಳು, "ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ" ಎಂದೂ ಅವನು ಹೇಳಿದನು (ಎಫೆಸ 4:18). ಅವರು "ಕ್ರಿಸ್ತನನ್ನು ಸೇರದವರು ... ದೇವರನ್ನರಿಯದವರು ... ದೂರವಾಗಿದ್ದವರು ..." (ಎಫೆಸ 2:12, 13), ದೇವರ "ವೈರಿಗಳು" (ರೋಮಾಪುರ 5:10). "ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು

ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ" ಎಂದು ಯಾಕೋಬನು ಬರೆದನು (ಯಾಕೋಬ 4:4ಬಿ).

**ನಮ್ಮ ಕ್ಷಮಾಪಣೆಗಾಗಿ ಯೇಸುವಿನ ಯಜ್ಞ**

ಮನುಷ್ಯನ ಕಾರ್ಯಗಳು ಮತ್ತು ಧರ್ಮಶಾಸ್ತ್ರದ ಕಾರ್ಯಗಳು ಪಾಪವನ್ನು ಇಲ್ಲವೇ ದೇವರ ಕೋಪವನ್ನು ತೆಗೆದು ಹಾಕಲಾರವು. ಇದು ಸಾಧ್ಯವಾಗಿದ್ದರೆ, ಯೇಸುವು ಶಿಲುಬೆಯ ಮೇಲೆ ಸಾಯುವ ಅಗತ್ಯತೆ ಇರಲಿಲ್ಲ. "ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವದಿಲ್ಲ. ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ" (ಗಲಾತ್ಯ 2:21) ಎಂದು ಪೌಲನು ಬರೆದನು. "ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದನು" (ಗಲಾತ್ಯ 3:10ಬಿ) ಎಂದೂ ಅವನು ಹೇಳಿದನು. ಧರ್ಮಶಾಸ್ತ್ರವು ಬೇಕುಬೇಕೆಂತಲೇ ತಪ್ಪುಗಳು ಆಗುವಂತೆ ಬಿಡುವದಿಲ್ಲ: ಅದು ಕರುಣೆಯನ್ನು ಒದಗಿಸುವದಿಲ್ಲ (ಗಲಾತ್ಯ 5:4; ಇಬ್ರಿಯ 10:28). ಇವು ಕೇವಲ ಯೇಸುವಿನ ರಕ್ತದಿಂದ ಒದಗಿಸಲ್ಪಡುತ್ತವೆ. ಮನುಷ್ಯನ ಭಾಗವಾಗಿ ಯಾವುದೂ ಪಾಪವನ್ನು ಕ್ಷಮಿಸುವಿದಿಲ್ಲ. ಹಳೇ ಸಂಗೀತವು ಹೇಳುವಂತೆ, "ನನ್ನ ಪಾಪಗಳನ್ನು ಯಾವುದು ತೊಳೆಯ ಬಲ್ಲದು? ಯೇಸುವಿನ ರಕ್ತವಲ್ಲದೇ ಬೇರಾವುದೂ ಇಲ್ಲ."[1] ನಮ್ಮ ಪರವಾಗಿ ಯೋಗ್ಯ ಪ್ರತಿಕ್ರಿಯೆ ಇಲ್ಲದೆ ನಾವು ತೊಳೆಯಲ್ಪಡದಿರುವಾಗ, ಯೇಸುವಿನ ರಕ್ತವು ಮಾತ್ರವೇ ಪಾಪಗಳನ್ನು ತೆಗೆದು ಹಾಕಬಹುದು.

ಯೇಸುವಿನ ರಕ್ತದ ಮುಖಾಂತರ (ಮತ್ತಾಯ 26:28; 1 ಯೋಹಾನ 1:7; ಪ್ರಕಟನೆ 1:5), ನೂತನ ಮತ್ತು ಜೀವಿಸುವ ಮಾರ್ಗದ ಮುಖಾಂತರ (ಇಬ್ರಿಯ 10:19, 20) ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ. ತನ್ನ ರಕ್ತವನ್ನು ಸುರಿಸುವದರಲ್ಲಿ, ನಮ್ಮ ಪಾಪಗಳಿಗಾಗಿ ಆತನು ಕ್ರಯಕೊಟ್ಟನು (ರೋಮಾಪುರ 6:23; 1 ಪೇತ್ರ 1:18-20) ಮತ್ತು ದೇವರ ಕೋಪವನ್ನು ತೆಗೆದು ಹಾಕುವ ಸಾಧ್ಯತೆ ಮಾಡಿದನು. "ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವುದು ಮತ್ತೂ ನಿಶ್ಚಯವಲ್ಲವೇ" (ರೋಮಾಪುರ 5:9). ಆತನ ರಕ್ತದಿಂದ ನಮಗೂ ದೇವರಿಗೂ ಮಧ್ಯ ಸಮಾಧಾನವನ್ನು ಉಂಟು ಮಾಡುವಂತೆ ಸಂಧಾನ ಪಡಿಸಿಕೊಳ್ಳ ಬೇಕೆಂದು ನಿಷ್ಕರ್ಷೆಮಾಡಿದನು (ಕೊಲೊಸ್ಸೆ 1:20). ಯೇಸುವು ನಮ್ಮನ್ನು "ಆತನ ಮುಂದೆ ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ" ನಿಲ್ಲಸಲಿಕ್ಕಾಗುವಂತೆ (ಕೊಲೊಸ್ಸೆ 1:22) ಮಾಡಿದನು. "ಅದರಂತೆ ಯೇಸು ಕೂಡ ಸ್ವಂತ ರಕ್ತದಿಂದ ತನ್ನ ಜನರನ್ನು ಪರಿಶುದ್ಧ ಪಡಿಸುವದಕ್ಕೋಸ್ಕರ ಪಟ್ಟಣದ ಹೊರಗೆ ಸತ್ತನು" (ಇಬ್ರಿಯ 13:12).

**ನಮ್ಮ ವಿಧೇಯ ಉತ್ತರ**

ಯೇಸುವಿನ ರಕ್ತ ಮಾತ್ರವೇ ನಮಗೆ ರಕ್ಷಣೆಯನ್ನು ಒದಗಿಸಬಲ್ಲದು (ಅಪೊಸ್ತಲರ ಕೃತ್ಯಗಳು 4:12). ಆತ್ಮಿಕ ಜೀವಿತವನ್ನು ಹೊಂದಿಕೊಳ್ಳುವದಕ್ಕಾಗಿ ಆತನು ಸಾಧ್ಯ ಮಾಡಿದ್ದಕ್ಕಾಗಿ, ನಾವು ಆತನಲ್ಲಿ ನಮ್ಮ ನಂಬಿಕೆಯನ್ನು ಇಡತಕ್ಕದ್ದು. ನಾವು ಆತನಿಗೆ ವಿಧೇಯರಾಗ ಬೇಕು ಮತ್ತು ಹಿಂಬಾಲಿಸ ಬೇಕು. ಯೋಹಾನ 3:36, "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು

ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು" ಎಂದು ಹೇಳುತ್ತದೆ. ವಚನದ ಈ ಭಾಷಾಂತರವು ಸರಿಯಾಗಿರುವುದು. "ಮಗನನ್ನು ನಂಬದೇ ಇರುವವನು" ಎಂದು KJV ಹೇಳುತ್ತದೆ, ಮತ್ತು "ಕುಮಾರನನ್ನು ತಿರಸ್ಕರಿಸುವವರು" ಎಂದು NIVಯಲ್ಲಿ ಇದೆ. ಇಲ್ಲಿ ಉಪಯೋಗಿಸಿದ ಪದವು *apeitheo* ಎಂಬುದು, ಅರ್ಥ "ವಿಧೇಯನಾಗಬೇಡ" ಎಂದು; ವಚನವು *apisteo* ಎಂಬ ಪದವನ್ನು ಒಳಗೊಂಡಿರುವದಿಲ್ಲ, ಅದರ ಅರ್ಥ "ನಂಬಬೇಡ" ಎಂದು.

ಯೇಸುವು "ಸಿದ್ಧಿಗೆ ಬಂದು ... ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:9). ಯೇಸುವು ಎಂದೂ ಅಪರಿಪೂರ್ಣನಾಗಿರಲಿಲ್ಲ. "Perfect" ಪದವು *teleios* ಅದರ ಅರ್ಥ "ತನ್ನ ರಕ್ತವನ್ನು ಸುರಿಸುವದರಿಂದ, ಜನರನ್ನು ರಕ್ಷಿಸುವ ಆತನ ಕಾರ್ಯವು ಪೂರ್ತಿಯಾಯಿತು, ತೀರಿತು" (ಯೋಹಾನ 19:30). ನಮ್ಮ ರಕ್ಷಣೆಗಾಗಿ ಕ್ರಯಕೊಟ್ಟು, ತನಗೆ ವಿಧೇಯ ರಾಗುವವರೆಲ್ಲರಿಗೆ ಆತನು ರಕ್ಷಣೆಯ ಮೂಲವಾದನು. ಎಲ್ಲಾ ಕ್ಷಮಾಪಣೆಯು ಯೇಸುವಿನ ರಕ್ತದ ಮೇಲೆ ಅವಲಂಭಿಸಿರುವುದು ಮತ್ತು ಬೇರೆ ರೀತಿಯಿಂದ ಅದು ಸಾಧ್ಯವಾಗುತ್ತಿರಲಿಲ್ಲ, ಯಾಕಂದರೆ "ರಕ್ತಧಾರೆಯಿಲ್ಲದೆ ಕ್ಷಮಾಪಣೆ ಇರುವದಿಲ್ಲ" (ಇಬ್ರಿಯ 9:22).

ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಲು ಶಕ್ತರಾಗಲು ನಾವೇನೂ ಮಾಡಲಾರೆವು; ಆದರೆ ತನಗೆ ವಿಧೇಯರಾಗುವವರಿಗೆ ಯೇಸುವು ತಾನು ಹೊಂದಿದ ರಕ್ಷಣೆಯನ್ನು ಕೊಡುತ್ತಾನೆ. ನಾವು ಕೃಪೆಯ ಮುಖಾಂತರ ರಕ್ಷಿಸಲ್ಪಟ್ಟಿದ್ದೇವೆ, ಯೋಗ್ಯತೆಯಿಲ್ಲದವರಿಗೆ ದೇವರ ದಯೆ - ನಮ್ಮ ಕ್ರಿಯೆಗಳ ಮುಖಾಂತರವಾಗಿ ಅಲ್ಲ, ಆದರೆ ಯೇಸುವಿನ ಕಾರ್ಯದ ಮುಖಾಂತರ (ಎಫೆಸ 2:8, 9). ಯೇಸುವಿನ ಚಿತ್ತಕ್ಕೆ ವಿಧೇಯರಾಗುವದರ ಮೂಲಕ ಆತನು ಶಿಲುಬೆಯ ಮೇಲಿನ ತನ್ನ ಮರಣದಲ್ಲಿ ಸುರಿಸಿದ ರಕ್ತದ ಮುಖಾಂತರ ಆತನು ಒದಗಿಸಿದ ರಕ್ಷಣೆಯನ್ನು ನಾವು ಸ್ವೀಕರಿಸಬಹುದು. ಇದು ಶುಭವಾರ್ತೆ, ಸುವಾರ್ತೆ ಆಗಿರುತ್ತದೆ. ಯೇಸುವಿಗೆ ವಿಧೇರಾಗದವರು - ಸುವಾರ್ತೆಗೆ ವಿಧೇಯರಾಗುವದಿಲ್ಲ - ಕರ್ತನ ಸನ್ನಿಧಿಯಿಂದ ದೂರದಲ್ಲಿ ನಿತ್ಯ ನಾಶನದೊಂದಿಗೆ ದಂಡಿಸಲ್ಪಡುವರು (2 ಥೆಸಲೊನೀಕ 1:8, 9).

ಯೇಸುವು ನಮ್ಮ ಪ್ರಾಯಶ್ಚಿತ್ತವಾಗಿದ್ದಾನೆ, ಕೃಪಾಸನವಾಗಿದ್ದಾನೆ (ಇಬ್ರಿಯ 9:5), ಅಲ್ಲಿ ದೇವರು ನಮ್ಮನ್ನು ಸಂಧಿಸಿ, ಯೇಸುವಿನ ರಕ್ತದಲ್ಲಿ ನಮ್ಮ ನಂಬಿಕೆಯ ಮುಖಾಂತರ ಪಾಪಗಳಿಂದ ನಮ್ಮನ್ನು ಶುದ್ಧೀಕರಿಸುತ್ತಾನೆ (ರೋಮಾಪುರ 3:25). ದೇವರಿಗಾಗಿ ನಮ್ಮಷ್ಟಕ್ಕೆ ನಾವೇನು ಮಾಡುವದರಲ್ಲಿ ಅಲ್ಲ, ಆದರೆ ಯೇಸುವು ನಮಗಾಗಿ ಮಾಡಿದ್ದರ ಮೇಲೆ ನಮ್ಮ ವಿಶ್ವಾಸವನ್ನಿಡತಕ್ಕದ್ದು. ನಂಬಿಕೆಯ ಮುಖಾಂತರ ಕೃಪೆಯಿಂದಲೇ ನಾವು ರಕ್ಷಿಸಲ್ಪಟ್ಟಿದ್ದೇವೆ (ಎಫೆಸ 2:8, 9). "ನಂಬಿಕೆಯಿಂದ ಈ ಕೃಪೆಯೊಳಗೆ" ಪ್ರವೇಶಿಸುತ್ತೇವೆ (ರೋಮಾಪುರ 5:2).

ಹಾಗಿದ್ದರೂ, ದೇವರು ನಮ್ಮನ್ನು ಆಶೀರ್ವದಿಸುವನೆಂಬ ವಿಶ್ವಾಸವು, ದೇವರಚಿತ್ತಕ್ಕೆ ವಿಧೇಯತೆಯಿಂದ ಉತ್ತರಿಸಲು ನಮಗೆ ಪ್ರೇರಣೆಕೊಡುತ್ತದೆ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ದೇವರು ಬಯಸುವ ನಂಬಿಕೆಗೆ ಪ್ರತಿಕ್ರಿಯೆಯು ಮಾನಸಾಂತರವನ್ನು (ಅಪೊಸ್ತಲರ ಕೃತ್ಯಗಳು 17:30), ಯೇಸುವಿನಲ್ಲಿ ನಂಬಿಕೆಯ ಅರಿಕೆಯನ್ನು (ರೋಮಾಪುರ 10:9, 10) ಮತ್ತು ಬಾಪ್ತಿಸ್ಮವನ್ನು ಒಳಗೊಂಡಿರುತ್ತದೆ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38; 22:16; ಕೊಲೊಸ್ಸೆ 2:12, 13; 1 ಪೇತ್ರ 3:21).

ಯೇಸುವು ನಮ್ಮಿಂದ ಬೇಕೆಂದು ಬಯಸುವ ಯಾವುದೂ ನಮ್ಮ ಪಾಪಗಳನ್ನು ತೆಗೆದು ಹಾಕುವದಿಲ್ಲ. ಯೇಸುವಿನ ರಕ್ತವು ಮಾತ್ರವೇ ಅದನ್ನು ಮಾಡಬಲ್ಲದು; ಆದಾಗ್ಯೂ ನಾವು ಆತನಿಗೆ ವಿಧೇಯರಾಗದಿದ್ದರೆ ಯೇಸುವು ನಮ್ಮ ಪಾಪಗಳನ್ನು ತೆಗೆದು ಹಾಕುವದಿಲ್ಲ. ಸುತ್ತುವುದು, ಕೂಗುವುದು ಮತ್ತು ಟಗರಿನ ಕೊಂಬನ್ನು ಊದುವುದು ಯೆರಿಕೋವಿನ ಗೋಡೆಗಳನ್ನು ಬೀಳಿಸದಿದ್ದಂತೆಯೇ (ಇಬ್ರಿಯ 11:30) ನಮ್ಮ ನಂಬಿಕೆ, ಮಾನಸಾಂತರ, ಅರಿಕೆ ಮತ್ತು ಬಾಪ್ತಿಸ್ಮಗಳು ನಮ್ಮ ಪಾಪಗಳನ್ನು ತೆಗೆದು ಹಾಕಲು ಸಾಕಷ್ಟಾದವುಗಳಾಗಿರುವದಿಲ್ಲ. ಇಸ್ರಾಯೇಲ್ಯರ ನಂಬಿಕೆಯು ದೇವರ ಆಜ್ಞೆಗೆ ಉತ್ತರ ಕೊಡುವಂತೆ ಪ್ರೇರೇಪಿಸಿತು, ಹಾಗೂ ಅವರು ಕಾರ್ಯ ಮಾಡಿದಾಗ ಬಹುಮಾನ ಹೊಂದಿದರು. ಅದೇ ರೀತಿಯಲ್ಲಿ ನಾವು ಮಾನಸಾಂತರ, ಅರಿಕೆ ಮತ್ತು ಬಾಪ್ತಿಸ್ಮಗಳು ನಮ್ಮ ಪಾಪಗಳನ್ನು ತೆಗೆದು ಹಾಕಲು ಸಾಕಷ್ಟಾದವುಗಳಾಗಿರುವದಿಲ್ಲ. ಇಸ್ರಾಯೇಲ್ಯರ ನಂಬಿಕೆಯು ದೇವರ ಆಜ್ಞೆಗೆ ಉತ್ತರ ಕೊಡುವಂತೆ ಪ್ರೇರೇಪಿಸಿತು, ಹಾಗೂ ಅವರು ಕಾರ್ಯಮಾಡಿದಾಗ ಬಹುಮಾನ ಹೊಂದಿದರು. ಅದೇ ರೀತಿಯಲ್ಲಿ ನಾವು ಮಾನಸಾಂತರ ಪಡುವಾಗ, ಅರಿಕೆ ಮಾಡುವಾಗ ಮತ್ತ ಬಾಪ್ತಿಸ್ಮ ಹೊಂದುವಾಗ ನಮ್ಮ ನಂಬಿಕೆಗೆ ಬಹುಮಾನ ದೊರೆಯುತ್ತದೆ. ನಾವು ದೇವರ ಚಿತ್ತವನ್ನು ಒಪ್ಪಿಕೊಳ್ಳುವಾಗ, ಆತನು ಮಾಡುವಂಥದ್ದು ನಮ್ಮ ರಕ್ಷಣೆಯನ್ನು ಹುಟ್ಟಿಸುವುದೆಂದು ನಮಗೆ ನಂಬಿಕೆಯಿರುತ್ತದೆ; ನಮ್ಮ ನಂಬಿಕೆಯು ನಮ್ಮ ಸ್ವಂತ ಕೃತ್ಯಗಳಲ್ಲಿ ಇರುವದಿಲ್ಲ. ಪೌಲನು ಹೀಗೆ ಹೇಳಿದ್ದಾನೆ,

> ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವುದೇ; ಇದೇ ಕ್ರಿಸ್ತೀಯ ಸುನ್ನತಿ; ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನಕೂಡ ಎದ್ದು ಬಂದಿರಿ, ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ (ಕೊಲೊಸ್ಸೆ 2:11-13).

ಆತನೊಂದಿಗೆ ಬಾಪ್ತಿಸ್ಮದಲ್ಲಿ ನಾವು ಹೂಣಲ್ಪಡುವಾಗ "ದೇವರ ಕಾರ್ಯದಲ್ಲಿ" ನಮ್ಮ ವಿಶ್ವಾಸವಿರತಕ್ಕದ್ದು. ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ, ದೇವರು ಯೇಸುವನ್ನು ಮರಣದಿಂದ ತರುವ ತನ್ನ ಶಕ್ತಿಯನ್ನು ಪ್ರದರ್ಶಿಸಿದನು. ಯೇಸುವನ್ನು ಎಬ್ಬಿಸಿದ್ದರಲ್ಲಿ ದೇವರು ಮಾಡಿದ್ದನ್ನು ಅವಲಂಭಿಸಿ, ನಾವು ಬಾಪ್ತಿಸ್ಮ ಹೊಂದಿದಾಗ ನಮ್ಮನ್ನು ನೂತನ ಜೀವಕ್ಕೆ ತರಲಿಕ್ಕೆ ನಮ್ಮಲ್ಲಿ ಕಾರ್ಯಮಾಡಲು ಆತನ ಶಕ್ತಿಯಲ್ಲಿ ನಮಗೆ ವಿಶ್ವಾಸವಿರಬೇಕು. ಬಾಪ್ತಿಸ್ಮದಲ್ಲಿ ದೇವರು ನಮ್ಮನ್ನು ಆತ್ಮಿಕ ಮರಣದಿಂದ ಜೀವಕ್ಕೆ ತರುವೆನೆಂದು ವಾಗ್ದಾನ ಮಾಡಿದ್ದರಿಂದ, ಆತನ ಕಾರ್ಯವು ನಮ್ಮನ್ನು ಆತ್ಮಿಕವಾಗಿ ಜೀವಂತರನ್ನಾಗಿ ಮಾಡುವುದು, ನಾವು ಬಾಪ್ತಿಸ್ಮ ಹೊಂದುವಾಗ, ದೇವರು ಮಾಡುತ್ತಿರುವಂಥದ್ದರಲ್ಲಿ ನಾವು ನಂಬಿಕೆಯಿಡಬೇಕು, ನಾವು ಸಾಧಿಸುವಂಥದ್ದರಲ್ಲಿ ಅಲ್ಲ. ಆತನ ಬೇಡಿಕೆಗಳನ್ನು ನಾವು ಪೂರೈಸುವಾಗ, ದೇವರು ನಮಗೆ ಆತ್ಮಿಕ ಜೀವವನ್ನು ಕೊಡುವನು ಮತ್ತು ನಮ್ಮ ಎಲ್ಲಾ ಅಪರಾಧಗಳನ್ನು ಕ್ಷಮಿಸುವನು.

ಯೇಸುವಿನ ರಕ್ತದಲ್ಲಿ ಮತ್ತು ನಮಗೆ ನೂತನ ಜೀವಕೊಡಲು ಹಾಗೂ ನಮ್ಮ ಪಾಪಗಳನ್ನು ಕ್ಷಮಿಸಲು ದೇವರ ಬಲದಲ್ಲಿ ನಂಬಿಕೆ ಇಡುವುದು ಮಾತ್ರವೇ ನಮ್ಮಿಂದ

ಕೇಳಲ್ಪಡುವದಿಲ್ಲ; ಅದನ್ನು ದಾಟಿ, ಯೇಸುವಿಗಾಗಿ ನೂತನ ಜೀವಿತವನ್ನು ನಾವು ಜೀವಿಸಲಿಕ್ಕಾಗುವಂತೆ ನಮ್ಮ ಹಿಂದಿನ ಜೀವಿತಕ್ಕೆ ನಾವು ಸಾಯುವದನ್ನು ದೇವರು ಅಪೇಕ್ಷಿಸುತ್ತಾನೆ. ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ಹೂಣಲ್ಪಡುವ ಹಂತದಲ್ಲಿ ನಮ್ಮ ಹಿಂದಿನ ಜೀವಿತಕ್ಕೆ ಸಾಯುತ್ತೇವೆ, ಆಗ ನಾವು ನೂತನ ಜೀವಿತದಲ್ಲಿ ನಡೆಯುತ್ತೇವೆ (ರೋಮಾಪುರ 6:4). ಸುವಾರ್ತೆಯಲ್ಲಿ ಒಳಗೊಂಡಿರುವ ಅಂಥ ಬೋಧನೆಗೆ ಹೃದಯದಿಂದ ನಾವು ವಿಧೇಯರಾಗುವಾಗ (ರೋಮಾಪುರ 6:17, 18). ನಮ್ಮ ಹಳೇ ಸ್ವಭಾವವು ಕ್ರಿಸ್ತನೊಂದಿಗೆ "ಶಿಲುಬೆಗೆ ಹಾಕಲ್ಪಡುವುದು," "ಪಾಪಾಧೀನ ಸ್ವಭಾವವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ" ದೇವರು ಈ ಯೋಜನೆಯನ್ನು ರೂಪಿಸಿದನು (ರೋಮಾಪುರ 6:6).

ಕ್ರಿಸ್ತನ ಪ್ರಕಟಿತ ವಾಕ್ಯದಿಂದ ಏನು ಮಾಡಬೇಕೆಂದು ಕಲಿಯುವದರ ಮೇಲೆ ನಮ್ಮ ವಿಶ್ವಾಸವು ಅವಲಂಭಿಸಿರತಕ್ಕದ್ದು (ರೋಮಾಪುರ 10:17). ಅಪೊಸ್ತಲರ ವಾಕ್ಯದ ಮುಖಾಂತರ ನಾವು ನಂಬಲಿಕ್ಕೆ ಬರುತ್ತೇವೆ ಎಂದು ಯೇಸು ಹೇಳಿದನು (ಯೋಹಾನ 17:20). ಇದರ ಒಂದು ಉದಾಹರಣೆ ಸದ್ಗುಣವುಳ್ಳವರಾದ ಬೆರೋಯದವರು, ಇವರು, "ದೇವರ ವಾಕ್ಯವನ್ನು ಸಿದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು. ಹೀಗಿರಲಾಗಿ ಅವರಲ್ಲಿ ಬಹುಮಂದಿ ನಂಬಿದರು; ಅದಲ್ಲದೆ ಕುಲೀನರಾದ ಗ್ರೀಕ್ ಹೆಂಗಸರಲ್ಲಿಯೂ ಗಂಡಸರಲ್ಲಿಯೂ ಅನೇಕರು ನಂಬಿದರು" (ಅಪೊಸ್ತಲರ ಕೃತ್ಯಗಳು 17:11, 12).

**ಕ್ರಿಸ್ತನಲ್ಲಿ ಒಬ್ಬ ನೂತನ ವ್ಯಕ್ತಿ**

ನಾವು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವಾಗ (ರೋಮಾಪುರ 6:3; ಗಲಾತ್ಯ 3:27) ಆತನಲ್ಲಿ ನಾವು ನೂತನ ಜನರಾಗುತ್ತೇವೆ (2 ಕೊರಿಂಥ 5:17). ಕ್ರಿಸ್ತನಲ್ಲಿರುವವರು ಸಭೆಯಾಗಿರುವ (ಎಫೆಸ 1:22, 23; ಕೊಲೊಸ್ಸೆ 1:18, 24) ಕ್ರಿಸ್ತನ ಒಂದು ದೇಹದಲ್ಲಿ ಇರುವವರು (ರೋಮಾಪುರ 12:5). ಬಾಪ್ತಿಸ್ಮವು ನಮ್ಮನ್ನು ಕ್ರಿಸ್ತನ ಒಂದು ದೇಹದ ಅಂಗಗಳನ್ನಾಗಿ ಮಾಡುವುದು (1 ಕೊರಿಂಥ 12:13, 27).

ನಾವು ನೀರಿನಿಂದಲೂ ಆತ್ಮನಿಂದಲೂ ಪುನಃ ಹುಟ್ಟದಿದ್ದರೆ, ನಾವು ದೇವರ ರಾಜ್ಯವನ್ನು ಪ್ರವೇಶಿಸಲಾರೆವು (ಯೋಹಾನ 3:5). ಪುನಃ ಹುಟ್ಟಿದವರು "ಚೊಚ್ಚಲು ಮಕ್ಕಳಾಗಿದ್ದು" ಸಭೆ ಆಗುತ್ತಾರೆ (ಇಬ್ರಿಯ 12:23), ಕ್ರಿಸ್ತನ ದೇಹವಾಗುತ್ತಾರೆ (ಎಫೆಸ 1:22, 23; ಕೊಲೊಸ್ಸೆ 1:18, 24). ಅವರು ಕ್ರಿಸ್ತನ ರಾಜ್ಯದಲ್ಲಿ ಪ್ರಜೆಗಳಾಗುತ್ತಾರೆ (ಎಫೆಸ 2:19; ಕೊಲೊಸ್ಸೆ 1:13). ಈ ನೂತನ ಜೀವಿಗಳು ಕ್ರಿಸ್ತನು ಕಟ್ಟಿದ (ಮತ್ತಾಯ 16:18) ಮತ್ತು ಆತನಿಗೆ ಒಪ್ಪಿಸಿಕೊಳ್ಳುವ (ಎಫೆಸ 5:24) ಕ್ರಿಸ್ತನ ಸಭೆಯನ್ನು ಮಾಡುತ್ತವೆ. ಈ ಸಭೆಯ ಸದಸ್ಯರು ಕ್ರಿಸ್ತನಿಂದ ಪ್ರೀತಿಸಲ್ಪಡುತ್ತಾರೆ (ಎಫೆಸ 5:25) ಮತ್ತು ಒಂದು ದಿನ ಆತನಿಗೆ ಒಪ್ಪಿಸಲ್ಪಡುತ್ತಾರೆ. ಅವರು ಪರಿಶುದ್ಧರೂ ದೋಷವಿಲ್ಲದವರೂ ಆಗಿರಲಿಕ್ಕಾಗುವಂತೆ (ಎಫೆಸ 5:27) ಆತನ ರಕ್ತದ ಬಲದ ಮುಖಾಂತರ (ನೋಡಿರಿ ಕೊಲೊಸ್ಸೆ 1:20) ಅವರನ್ನು ಕಳಂಕ, ಸುಕ್ಕು, ಇಲ್ಲವೇ ಅಂಥ ಯಾವುದೇ ಸಂಗತಿಯಿಲ್ಲದಂತೆ ಮಾಡಿದ್ದಾನೆ.

## ಮುಕ್ತಾಯ

ಕ್ರಿಸ್ತನ ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಳ್ಳುವದಕ್ಕಾಗಿ ಅಗತ್ಯತೆಗಳು ಮೋಶೆಯ ಮುಖಾಂತರ ಕೊಡಲ್ಪಟ್ಟ ಧರ್ಮಶ್ತ್ರಾದಲ್ಲಿ ಬೋಧಿಸಲ್ಪಟ್ಟವುಗಳಿಗಿಂತ ಭಿನ್ನವಾಗಿವೆ. ಇಸ್ರಾಯೇಲ್ಯರು ತಮ್ಮ ಕ್ಷಮಾಪಣೆಗಾಗಿ ಸಾಂಕೇತಿಕ ಯಜ್ಞವಾಗಿ ಪ್ರಾಣಿ ರಕ್ತವನ್ನು ಉಪಯೋಗಿಸುತ್ತಿದ್ದರು, ಆದರೆ ಅವರ ಪಾಪಗಳನ್ನು ಕ್ಷಮಿಸಿದ್ದು ಯೇಸುವಿನ ರಕ್ತವಾಗಿತ್ತು. ಅದರಂತೆ, ಯೇಸುವಿನ ರಕ್ತವು, ಆತನ ರಕ್ತದಲ್ಲಿ ನಾವು ನಮ್ಮ ವಿಶ್ವಾಸವನ್ನಿಡುವಾಗ ಮತ್ತು ಇಂದಿನ ಜನರಿಗಾಗಿ ಆತನ ಕೇಳುವಿಕೆಗಳಿಗೆ ವಿಧೇಯರಾಗುವಾಗ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಕ್ರೈಸ್ತರಾಗುವವರನ್ನು ಕ್ಷಮಿಸುತ್ತದೆ.

ಈ ಬೇಡಿಕೆಗಳನ್ನು ಪೂರೈಸಲು, ನಾವು ನಮ್ಮ ಪಾಪಭರಿತಮಾರ್ಗಗಳನ್ನು ಬದಲಾಯಿಸಲು ಮತ್ತು ಯೇಸುವಿಗಾಗಿ ಜೀವಿಸಲು, ಆತನಲ್ಲಿ ನಮ್ಮ ವಿಶ್ವಾಸದ ಅರಿಕೆಮಾಡಲು ಮತ್ತು ಬಾಪ್ತಿಸ್ಮದಲ್ಲಿ ಆತನೊಂದಿಗೆ ಹೂಣಲ್ಪಡಲು ಮತ್ತು ಎಬ್ಬಿಸಲ್ಪಡಲು ನಿರ್ಣಯಿಸಿಕೊಳ್ಳತಕ್ಕದ್ದು (ಅಪೊಸ್ತಲರ ಕೃತ್ಯಗಳು 2:38; ಕೊಲೊಸ್ಸೆ 2:12). ನಾವು ಕ್ರೈಸ್ತರಾದ ನಂತರ ನಾವು ಬೆಳಕಿನಲ್ಲಿ ನಡೆದರೆ ಮತ್ತು ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ ಆತನ ರಕ್ತದ ಮುಖಾಂತರ ನಮಗಿರುವ ಕ್ಷಮಾಪಣೆಯು ಮುಂದುವರಿಸಲ್ಪಡುವುದು (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:7-9). ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಕ್ಷಮಾಪಣೆಯ ಇತರ ಯಾವುದೇ ಮಾರ್ಗವು ಕೊಡಲ್ಪಟ್ಟಿಲ್ಲ.

---

ಟಿಪ್ಪಣಿ

[1]Robert Lowry, "Nothing But the Blood," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994).

---

## ಶಿಲುಬೆಯ ಮೇಲೆ ರಕ್ಷಿಸಲ್ಪಟ್ಟ ದುಷ್ಕರ್ಮಿಯ ವಿಷಯ

ಅನೇಕರು ಹೊಸ ಒಡಂಬಡಿಕೆಯ ಸ್ಪಷ್ಟವಾದ ಬೋಧನೆಗಳನ್ನು ತಿರಸ್ಕರಿಸುತ್ತಾರೆ, ಯಾಕಂದರೆ ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ದುಷ್ಕರ್ಮಿಗಳಲ್ಲಿ ಒಬ್ಬನು ಬಾಪ್ತಿಸ್ಮವಿಲ್ಲದೆ ರಕ್ಷಿಸಲ್ಪಟ್ಟನು ಎಂದು ನಂಬುತ್ತಾರೆ. ಈ ಮನುಷ್ಯನು ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ರಕ್ಷಿಸಲ್ಪಟ್ಟ ಒಂದು ಉದಾಹರಣೆಯಾಗಿರುವದಿಲ್ಲ. ದೇವರೊಂದಿಗೆ ಸಂಧಾನವಾಗಲು ಅವನು ಯೇಸುವಿನ ಹೊಸ ಒಡಂಬಡಿಕೆಯನ್ನಾಗಲೀ ಧರ್ಮಶಾಸ್ತ್ರದ ಅಗತ್ಯತೆಯನ್ನಾಗಲೀ ನೆರವೇರಿಸಲಿಲ್ಲ.

ಭೂಲೋಕದಲ್ಲಿ, ಯೇಸುವು ತಾನು ಹಾಗೆ ಮಾಡಬೇಕೆಂದು ಆಯ್ದುಕೊಂಡಾಗಲೆಲ್ಲಾ ಮತ್ತು ಆತನಿಗೆ ತೃಪ್ತಿಕರವಾಗಿ ಕಂಡು ಬಂದ ಪರಿಸ್ಥಿತಿಗಳಲ್ಲಿ ಪಾಪಗಳನ್ನು ಉಚಿತವಾಗಿ ಕ್ಷಮಿಸಿದನು. ಉದಾಹರಣೆಯಾಗಿ, ಪಾರ್ಶ್ವವಾಯು ರೋಗಿಯ (ಮತ್ತಾಯ 9:2-8; ಮಾರ್ಕ 2:3-12; ಲೂಕ 5:17-26) ಮತ್ತು ಆತನ ಪಾದಗಳನ್ನು ತೊಳೆದ ಮಹಿಳೆಯ (ಲೂಕ 7:44-50) ಪಾಪಗಳನ್ನು ಆತನು ಕ್ಷಮಿಸಿದನು. ಈ ವ್ಯಕ್ತಿಗಳಲ್ಲಿ

ವಿಶ್ವಾಸವಿತ್ತು, ಆದರೆ ಕ್ಷಮಿಸಲ್ಪಡುವದಕ್ಕಾಗಿ ನಮ್ಮಲ್ಲಿ ಬೇಕಾದಂಥ ವಿಶ್ವಾಸವು ಅವರಲ್ಲಿ ಇರಲಿಲ್ಲ. ನಮ್ಮ ವಿಶ್ವಾಸವು ಯೇಸುವಿನ ರಕ್ತದಲ್ಲಿ (ರೋಮಾಪುರ 3:25) ಮತ್ತು ಆತನ ಪುನರುತ್ಥಾನದಲ್ಲಿ (ರೋಮಾಪುರ 10:9) ಇರತಕ್ಕದ್ದು. ಶಿಲುಬೆಯ ಮೇಲಿನ ಆ ದುಷ್ಕರ್ಮಿಯಂತೆ, ಈ ಜನರು ಧರ್ಮಶಾಸ್ತ್ರದ ಬೇಡಿಕೆಗಳಿಗೆ ಇಲ್ಲವೇ ಯೇಸುವಿನ ಹೊಸ ಒಡಂಬಡಿಕೆಗೆ ವಿಧೇಯರಾಗದೇ ಕ್ಷಮಾಪಣೆ ಹೊಂದಿದರು.

ಯೇಸುವು ಕ್ಷಮಿಸಿದ ಇವರೆಲ್ಲರೂ ಹೊಸ ಒಡಂಬಡಿಕೆಯ ಪರಿಣಾಮ ಕಾರಿಯಾಗುವ ಮೊದಲು ತಮ್ಮ ಕ್ಷಮಾಪಣೆಯನ್ನು ಸ್ವೀಕರಿಸಿಕೊಂಡರು. ಪಾಪಿಗಳ ಕ್ಷಮಾಪಣೆಗಾಗಿ ಮಾನಸಾಂತರವು ಯೇಸುವಿನ ಹೆಸರಿನಲ್ಲಿ ಜನಾಂಗಗಳಿಗೆ ಇನ್ನೂ ಪ್ರಸಂಗಿಸಲ್ಪಟ್ಟಿರಲಿಲ್ಲ (ಲೂಕ 24:47). ಈ ಕಾರಣದಿಂದ, ಈ ವ್ಯಕ್ತಿಗಳು ರಕ್ಷಿಸಲ್ಪಡುವದಕ್ಕಾಗಿ ಹೊಸ ಒಡಂಬಡಿಕೆಯ ಕರಾರುಗಳಿಗೆ ವಿಧೇಯರಾಗಿರಲಿಕ್ಕಿಲ್ಲ. ಪೇತ್ರನು, ಯೇಸುಕ್ರಿಸ್ತನ ಹೆಸರಿನಲ್ಲಿ ಕ್ಷಮಾಪಣೆಯನ್ನು ಪ್ರಸಂಗಿಸಿದ ಮೊದಲನೆಯ ವ್ಯಕ್ತಿಯು ಜನರಿಗೆ ಹೀಗೆ ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪರಿಶುದ್ಧಾತ್ಮವೆಂಬ ವರವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ಅಪೊಸ್ತಲರ ಕೃತ್ಯಗಳ ಗ್ರಂಥದಲೆಲ್ಲಾ ಸುವಾರ್ತೆಗೆ ಕಿವಿಗೊಟ್ಟವರೆಲ್ಲರೂ ಸತತವಾಗಿ ಪೇತ್ರನಿಂದ ಆಜ್ಞಾಪಿಸಲ್ಪಟ್ಟಿದ್ದೆಲ್ಲವನ್ನೂ ಮಾಡಿದರು (ಅಪೊಸ್ತಲರ ಕೃತ್ಯಗಳು 2:41; 8:12, 36-39; 9:18; 10:47, 48; 16:15, 33; 18:8). ಆ ವ್ಯಕ್ತಿಗಳು, ಶಿಲುಬೆಯ ಮೇಲಿನ ದುಷ್ಕರ್ಮಿಯಲ್ಲ, ಕ್ಷಮಿಸಲ್ಪಡಲು ಸುವಾ ರ್ತೆಗೆ ಹೀಗೆ ಪ್ರತಿಕ್ರಿಯೆ ತೋರಿಸಬೇಕು ಎಂಬುದಕ್ಕೆ ನಮಗೆ ಉದಾಹರಣೆಯಾಗಿದ್ದಾರೆ. "ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" ಎಂದು ಮಾರ್ಕ 16:16ರಲ್ಲಿ ಯೇಸುವು ಬೋಧಿಸಿದಂತೆ ಯೇಸುವಿನ ರಕ್ತದಿಂದ ಪ್ರತಿಷ್ಠಿಸಲ್ಪಟ್ಟ ಹೊಸ ಒಡಂಬಡಿಕೆಗೆ ಅವರು ವಿಧೇಯರಾದರು.

## ನಾವು ಯಾವ ಯುಗದ ಅಧೀನತೆಯಲ್ಲಿ ಇದ್ದೇವೆ?

ಒಂದು "ಡಿಸ್ಪೆನ್ಸೇಶನಲ್" ಗುಂಪು ಹೆಚ್ಚಾಗಿ ಇತರ ಎಲ್ಲಾ ಗುಂಪುಗಳಿಗಿಂತ ಬಾಪ್ತಿಸ್ಮವನ್ನು, ಕ್ರೈಸ್ತ ಯುಗವನ್ನು ಎರಡು ಪ್ರತ್ಯೇಕ ಯುಗಗಳಾಗಿ ಇಲ್ಲವೇ ಡಿಸ್ಪೆನ್ಸೇ ಶನ್‌ಗಳಾಗಿ ವಿಭಾಗಿಸುವದನ್ನು ಕುರಿತು ಬೋಧಿಸುವದರಲ್ಲಿ ಭಿನ್ನತೆಯುಳ್ಳ ದ್ದಾಗಿರುತ್ತದೆ. ಯೆಹೂದ್ಯರಿಗೆ ಅಪೊಸ್ತಲನಾದ ಪೇತ್ರನು ಯೆಹೂದಿ ಯುಗದಲ್ಲಿ ರಕ್ಷಣೆಯನ್ನು ಪ್ರಸಂಗಿಸಿದನು ಎಂದು ಅವರು ಬೋಧಿಸುತ್ತಾರೆ. ಈ ಯುಗದಲ್ಲಿ ಪಾಪಗಳ ಕ್ಷಮಾಪಣೆಗಾಗಿ ಮತ್ತು ರಕ್ಷಣೆಗಾಗಿ ಬಾಪ್ತಿಸ್ಮವನ್ನು ದೇವರು ಕೇಳಿದನೆಂದು ಅವರು ಹೇಳುತ್ತಾರೆ (ಅಪೊಸ್ತಲರ ಕೃತ್ಯಗಳು 2:38; 22:16; 1 ಪೇತ್ರ 3:21). ಕೊರ್ನೇಲ್ಯನು ಮತ್ತು ಅವನ ಕುಟುಂಬದ ಸದಸ್ಯರು ಸಭೆಯೊಳಗೆ ತರಲ್ಪಟ್ಟಾಗ ಈ ಯುಗವು ಅಂತ್ಯಗೊಂಡಿತು ಎಂದೂ ಅವರು ಹೇಳುತ್ತಾರೆ. ಈ ಕಾಲಮಾನದ ಬೋಧನೆಗನುಗುಣವಾಗಿ, ಈ ಪ್ರಥಮ ಅನ್ಯ ಕ್ರೈಸ್ತರು ಕೇವಲ ನಂಬಿಕೆಯ ಮುಖಾಂತರ ಕೃಪೆಯ ರಕ್ಷಣೆಯ ಯುಗದಲ್ಲಿ ಪ್ರಥಮ ಮಾರ್ಪಟ್ಟವರು ಆಗಿರುತ್ತಾರೆ (ಪೌಲನ ಸೇವೆಯಂತೆ ದೃಷ್ಟಿಸುವಾಗ, ಅವನಿಂದ ಹೊಸ ಯುಗವು ಪರಿಚಯಿಸಲ್ಪಟ್ಟಿತು). ಎಲ್ಲಾ ಜನರು ಈಗ ಈ ಅನಂತರದ ಯುಗದಲ್ಲಿದ್ದಾರೆ ಎಂದು ಹೇಳಲ್ಪಟ್ಟಿದೆ?

ಈ ವಿಚಾರ ಸರಣಿಯು ಪರಿಶುದ್ಧ ಬರಹಗಳನ್ನು ಮೀರುತ್ತದೆ. ಹೊಸ

ಒಡಂಬಡಿಕೆಯು ಯೇಸುವಿನ ಮರಣದಿಂದ ಪ್ರಾರಂಭಿಸಲ್ಪಟ್ಟಿತು ಹಾಗೂ ಯೆರೂಸಲೇಮಿನಿಂದ ಯೇಸುವಿನ ಹೆಸರಿನಲ್ಲಿ ಪ್ರಸಂಗಿಸಲ್ಪಡುವುದು ಮುಂದುವರಿಸಲ್ಪಟ್ಟಿತು ಎಂದು ಇಬ್ರಿಯ 9:16, 17 ಬೋಧಿಸುತ್ತದೆ (ಲೂಕ 24:47). ಸುವಾರ್ತೆಯ ಸಂದೇಶವು ಪಂಚಾಶತ್ತಮ ದಿನದಂದು ಮೊದಲಬಾರಿಗೆ ಪ್ರಸಂಗಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2). ಯುಗದ ದೃಷ್ಟಿಕೋನವು ಯೆಹೂದ್ಯರಿಗೂ ಅನ್ಯಜನಾಂಗದವರಿಗೂ ಮಧ್ಯದಲ್ಲಿ ದೇವರು ಯಾವ ಭಿನ್ನತೆಯನ್ನೂ ಮಾಡಲಿಲ್ಲ ಎಂಬ ಪೇತ್ರನ ಹೇಳಿಕೆಯನ್ನು ಅರ್ಥವಿಲ್ಲದ್ದನ್ನಾಗಿ ಮಾಡುತ್ತದೆ (ಅಪೊಸ್ತಲರ ಕೃತ್ಯಗಳು 15:8, 9) ಮತ್ತು ಯೆಹೂದ್ಯರು "ಕರ್ತನಾದ ಯೇಸುವಿನ ಕೃಪೆಯ ಮುಖಾಂತರ ರಕ್ಷಿಸಲ್ಪಡುವರು, ಹಾಗೆಯೇ ಅವರೂ (ಅನ್ಯರು) ಹೊಂದುವರು" (ಅಪೊಸ್ತಲರ ಕೃತ್ಯಗಳು 15:11) ಎಂಬ ಹೇಳಿಕೆಯೂ ಅರ್ಥವಿಲ್ಲದ್ದಾಗುತ್ತದೆ.

ಪೌಲನು ಪ್ರಸಂಗಿಸಿದ ಸುವಾರ್ತೆಯು ಅವನು ಕ್ರೈಸ್ತನಾಗುವದಕ್ಕಿಂತ ಮೊದಲು ಪ್ರಸಂಗಿಸಿದ್ದರಿಂದ ಭಿನ್ನವಾಗಿರಲಿಲ್ಲ. "ಒಂದು ಸಲ ನಾಶಮಾಡಲು ಅವನು ಪ್ರಯತ್ನಿಸಿದ ವಿಶ್ವಾಸವನ್ನು" ಪ್ರಸಂಗಿಸುತ್ತಿದ್ದನು (ಗಲಾತ್ಯ 1:23ಬಿ). ಯೆಹೂದ್ಯರೂ ಅನ್ಯಜನಾಂಗದವರೂ ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದಾಗ ಮತ್ತು ಆತನನ್ನು ಧರಿಸಿಕೊಂಡಾಗ ಅವರೆಲ್ಲರೂ ಅದೇ ದೇಹದಲ್ಲಿ, ಕ್ರಿಸ್ತನ ಒಂದೇ ದೇಹದಲ್ಲಿ ಪ್ರವೇಶಿಸುವರು (ಗಲಾತ್ಯ 3:27, 28).

© 2009 Truth for Today